**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ. 237/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಲಿಂಗಪ್ಪ |
| ತಂದೆಯ  ಹೆಸರು | : | ಹೊನ್ನಪ್ಪಗೌಡ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಗುತ್ತಿಗಾರ್, ಸೂಳ್ಯ ತಾ. |

**ಸಾಕ್ಷಿಯನ್ನು ದಿನಾಂಕಃ 06.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಎಂ.ಎಸ್.ಎಂ. / ಶ್ರೀ. ಪಿ.ಎಂ.ಜಿ. ವಕೀಲರಿಂದಃ**

ನಾನು ದಿನಾಂಕಃ 07.08.2023 ರಂದು ನಮ್ಮ ಊರಾದ ಗುತ್ತಿಗಾರ್ ನಿಂದ ಎಲಿಮಲೆ ಸೂಳ್ಯಕ್ಕೆ ಬಸ್ ನಲ್ಲಿ ಪ್ರಯಾಣ ಮಾಡಿರುತ್ತೇನೆ. ಆ  ಸಮಯದಲ್ಲಿ  ನಾನು ಗುತ್ತಿಗಾರ್ ಕೆನರಾ ಬ್ಯಾಂಕ್ ಶಾಖೆಯ ನನ್ನ ಖಾತೆಗೆ ಸಂಬಂಧಿಸಿದ 25 ಚೆಕ್ ಲೀಫ್ ಗಳಿರುವ ಸಂಪೂರ್ಣ ಚೆಕ್ ಪುಸ್ತಕವನ್ನು ಜೇಬಿನಲ್ಲಿ ಇಟ್ಟುಕೊಂಡು ಹೋಗಿರುತ್ತೇನೆ.  ಸದರಿ ಎಲ್ಲಾ  ಚೆಕ್ಕುಗಳು ಸಹಿ ಮಾಡದ ಖಾಲಿ ಚೆಕ್ಕುಗಳಾಗಿರುತ್ತವೆ.  ಸದರಿ ಚೆಕ್ ಪುಸ್ತಕದಲ್ಲಿದ್ದ ಚೆಕ್ ಲೀಫ್ ಗಳ ಪೈಕಿ ಈ ಪ್ರಕರಣದಲ್ಲಿ ಹಾಜರುಪಡಿಸಿದ ಚೆಕ್ಕು ಕೂಡ ಒಂದು ಚೆಕ್ ಆಗಿದ್ದು ಅದು ಸದರಿ ಚೆಕ್ ಪುಸ್ತಕ ಮಧ್ಯದಲ್ಲಿರುವ ಚೆಕ್ ಆಗಿರುತ್ತದೆ.   ನಂತರ ನಾನು ಬಸ್ ನಿಂದ ಸೂಳ್ಯದಲ್ಲಿ ಇಳಿದು ನೋಡಿದಾಗ ನನ್ನ ಜೇಬಿನಲ್ಲಿದ್ದ ಚೆಕ್ ಪುಸ್ತಕ

ಕಾಣೆಯಾಗಿರುವುದು ಕಂಡುಬಂದಿರುತ್ತದೆ. ನಂತರ ನಾನು ಈ ಬಗ್ಗೆ ವಿಚಾರಿಸಲಾಗಿ ಎಲ್ಲಿಯೂ ಸದರಿ ಕಳೆದು ಹೋದ ಚೆಕ್ ಪುಸ್ತಕ ಸಿಕ್ಕಿರುವುದಿಲ್ಲ. ನಂತರ ದಿನಾಂಕಃ 11.08.2023 ರಂದು ನಾನು ಖಾತೆ ಹೊಂದಿದ್ದ ಸದರಿ ಗುತ್ತಿಗಾರ್ ನ ಕೆನರಾ ಬ್ಯಾಂಕ್ ಗೆ ಹೋಗಿ ವಿಚಾರಿಸಿದ್ದು ಅವರು ತಮಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ನಂತರ ನಾನು ಅದೇ ದಿನ ಸದರಿ ಬ್ಯಾಂಕ್ ಗೆ ಕಂಪ್ಲೇಂಟ್ ನೀಡಿ ನನ್ನ ಸದರಿ ಚೆಕ್ ಪುಸ್ತಕ ಕಳೆದು ಹೋಗಿರುವುದಾಗಿ ಹಾಗು ಅದಕ್ಕೆ ಸಂಬಂಧಿಸಿದ ಎಲ್ಲಾ ಚೆಕ್ ಗಳನ್ನು ಬ್ಲಾಕ್ ಮಾಡುವಂತೆ ಮನವಿ ಮಾಡಿಕೊಂಡಿರುತ್ತೇನೆ. ಈ ಬಗ್ಗೆ ಅದೇ ದಿನ ಬ್ಯಾಂಕ್ ನವರು ನನಗೆ ಹಿಂಬರಹ ನೀಡಿರುತ್ತಾರೆ. ನಂತರ ಸ್ವಲ್ಪ ದಿನ ಬಿಟ್ಟು ನಾನು ಮತ್ತೆ ನನ್ನ ಬ್ಯಾಂಕ್ ಗೆ ಹೋಗಿ ಈ ಬಗ್ಗೆ ವಿಚಾರಿಸಿದಾಗ ಬ್ಯಾಂಕ್ ನವರು ಈ ಬಗ್ಗೆ ಪೋಲೀಸರಿಗೆ ಕಂಪ್ಲೇಂಟ್ ನೀಡುವಂತೆ ನನಗೆ ಸೂಚಿಸಿರುತ್ತಾರೆ. ಆ ಪ್ರಕಾರ ನಾನು ದಿನಾಂಕಃ 11.09.2023 ರಂದು ಸೂಳ್ಯ ಪೋಲೀಸ್ ಠಾಣೆಗೆ ಹೋಗಿ ಕಂಪ್ಲೇಂಟ್ ನೀಡಲು ಹೋಗಿದ್ದು ಆಗ ಅವರು ಆನ್ ಲೈನ್ ಮೂಲಕ ಕಂಪ್ಲೇಂಟ್ ನೀಡುವಂತೆ ತಿಳಿಸಿದ್ದು ಆ ಪ್ರಕಾರ ನಾನು ಆನ್ ಲೈನ್ ಮೂಲಕ ಕಂಪ್ಲೇಂಟ್ ನೀಡಿರುತ್ತೇನೆ. ಅದಕ್ಕೆ ಅವರು ಸ್ವೀಕೃತಿ ನೀಡಿರುತ್ತಾರೆ. ಸ್ವಲ್ಪ ದಿನಗಳ ನಂತರ ಈ ಪಿರ್ಯಾದಿನ ಪಿರ್ಯಾದುದಾರರಾದಂತಹ ಆದರ್ಶ್ ಎನ್ನುವ ಅಪರಿಚಿತ ವ್ಯಕ್ತಿ ನನಗೆ ಅವರ ವಕೀಲರ ಮೂಲಕ ನೋಟೀಸ್ ನೀಡಿ ನಾನು ಆತನಿಂದ ರೂ. 21,000/- ಸಾಲ ಪಡೆದಿರುವುದಾಗಿ ಹಾಗು ಆ ಬಗ್ಗೆ ನಾನು ಅವರಿಗೆ ಚೆಕ್ ಅನ್ನು ನೀಡಿರುವುದಾಗಿ ಸದರಿ ಸದರಿ ಹಣವನ್ನು ಹಿಂತಿರುಗಿಸುವಂತೆ ಕೇಳಿಕೊಂಡಿರುತ್ತಾರೆ. ನನಗೆ ಸದರಿ ಪಿರ್ಯಾದುದಾರರಾದಂತಹ ಆದರ್ಶ್ ಎನ್ನುವ

ವ್ಯಕ್ತಿಯ ಪರಿಚಯವಿರುವುದಿಲ್ಲ ಹಾಗು ನಾನು ಅವರೊಂದಿಗೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ ಹಾಗು ಈ ಸಂಬಂಧ ಯಾವುದೇ ಚೆಕ್ ಅನ್ನು ಸಹ ನೀಡಿರುವುದಿಲ್ಲ. ಆತ ನೋಟೀಸ್ ಕಳುಹಿಸಿದ ನಂತರ ನಾನು ಸದರಿ ನೋಟೀಸ್ ಗೆ ನಾನು ನನ್ನ ವಕೀಲರ ಮೂಲಕ ಪ್ರತ್ಯುತ್ತರ ಕೊಟ್ಟು ಸದರಿ ಪ್ರತ್ತ್ಯುತ್ತರದಲ್ಲಿ ನಾನು ಪಿರ್ಯಾದಿಯೊಂದಿಗೆ ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲವೆಂಬುದಾಗಿ ಹಾಗು ಮೇಲೆ ಹೇಳಿದಂತೆ ಚೆಕ್ ಬುಕ್ ಕಳೆದು ಹೋದ ಸಂಗತಿಯನ್ನು ಸಹ ತಿಳಿಸಿರುತ್ತೇನೆ. ಆ ರೀತಿ ನಾನು ಸದರಿ ನೋಟೀಸ್ ಗೆ ಉತ್ತರವನ್ನು ಕೊಟ್ಟಾಗ್ಯೂ ಸಹ ಪಿರ್ಯಾದಿಯು ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ನನ್ನ ವಿರುದ್ದ ಈ ಸುಳ್ಳು ಪ್ರಕರಣವನ್ನು ಹೂಡಿರುತ್ತಾರೆ. ಪಿರ್ಯಾದಿಯು ಪಿರ್ಯಾದಿನಲ್ಲಿ ತಿಳಿಸಿರುವಂತೆ ನಾನು ಪಿರ್ಯಾದಿಯಾಂದಿಗೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ ಮತ್ತು ಆ ಬಗ್ಗೆ ಯಾವುದು ಚೆಕ್ ಅನ್ನು ನೀಡಿರುವುದಿಲ್ಲ ಹಾಗು ನನಗೆ ಪಿರ್ಯಾದಿಯ ಪರಿಚಯವೇ ಇರುವುದಿಲ್ಲ ಹಾಗು ನಾನು ಪಿರ್ಯಾದಿಗೆ ನಿ.ಪಿ.–1 ರಲ್ಲಿ ತಿಳಿಸಿರುವ ಯಾವುದೇ ಹಣವನ್ನು ನೀಡಲು ಭಾದಸ್ಥನಲ್ಲ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿರುತ್ತಾರೆ, ಸಮಯಾವಕಾಶ ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**